Regd No B C 155 7-2-1970

SATYAVADI Daily, MYSORE 4 ‡ 53 rd Year of Publication

Golden Jubilee Celebrated Paper

ಸತ್ಯವಾದಿ

ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಭಾರತ ನಾಲು ವಲಯಗಳಾಗಲು ಒತ್ತಾಯ

ಫುಟ್‌ಬಾಲ್ ಆಟಗಾರನಿಗೆ ಕಿರೀಟ

ಸಾಟಿಯಾಗೊ— ಬ್ರಜಿಲಿನ ನಿಪುಣ ಫುಟ್‌ಬಾಲ್ ಆಟಗಾರನಾದ 'ರಾಜಾ' ಪೆಲೆಗೆ 15000 ಡಾಲರು (ರೂ 1125 ಸಾವಿರ) ಚಿನ್ನ ಮತ್ತು ಬೆಳ್ಳಿ ಕಿರೀಟ ಧಾರಣೆ ಮಾಡಲಾಯಿತು – ನಂತರ ಅವನು ಆಟಕ್ಕಿಳಿದು ಮೆಕ್ಸಿಕೋದ ಅಮೇರಿಕಾ ಟೀಂ ಮೇಲೆ 3 ಗೊಲುಗಳನ್ನು ಹೊಡೆದನು – ಇಲ್ಲೀವರೆಗೆ ಅವನು 1014 ಗೋಲುಗಳನ್ನು ಹೊಡೆದಿರುವನು.

★

ಬೆಲ್ಲ ರಫ್ತು

ಬೆಂಗಳೂರು— ರಾಜ್ಯದಿಂದ ಹೊರಕ್ಕೆ ಬೆಲ್ಲದ ಮೇಲಿನ ರಫ್ತು ನಿರ್ಬಂಧನವನ್ನು ಜೂ 30 ರವರೆಗೆ ಪಡಲಿಸಲು ಸರ್ಕಾರ ಜಿಲ್ಲಾಕಾರಿಗಳಿಗೆ ತಿಳಿಸಿದೆ.

○

ರಾಜ್ಯಸಭೆ ಸದಸ್ಯರು

ನವದೆಹಲಿ— ರಾಜ್ಯಸಭೆಯಲ್ಲಿನ 79 ಮಂದಿ ಏಪ್ರಿಲ್ 2 ರಂದು ನಿವೃತ್ತರಾಗು ತ್ತಾರೆ - ಸ್ಥಾಗಳಿಗೆ ಹೊಸ ಚುನಾವಣೆ ನಡೆಯುವುದು.

ಭಾರಿ ಜಾಕ್ ಪಾಟ್

ಬೊಂಬಾಯಿ— ನಾಳೆ ಕುದುರೆ ಜೂ ಜಿದಲ್ಲಿ ಜಾಕ್ ಪಾಟ್ ಮುಖ್ಯ ಆಕರ್ಷ ಣೀಯವಾಗಿದೆ - ಕಳೆದ ಭಾನುವಾರ ಮುಂದುವರಿಸಲಾದ ರೂ. 1679290 ರೂ ಅರ್ಧ ಕೋಟಿಗೆ ಏರುವ ನಿರೀಕ್ಷೆಯಿದೆ

○

ಜೀವವಿಮಾ ಶತಮಾನೋತ್ಸವ

ಭಾರತದಲ್ಲಿ ಜೀವವಿಮಾ ಉದ್ಯೋಗದ ಶತಮಾನೋತ್ಸವವನ್ನು ಭಾರತ ಜೀವ ವಿಮಾ ಸಂಸ್ಥೆ ಈ ವರ್ಷ ನೆರವೇರಿಸಲಿದೆ.

★

ಮುಖ್ಯಮಂತ್ರಿಯವರ ಆಸ್ತಿ ತನಿಖೆ

ಹೈದರಾಬಾದು— ಮುಖ್ಯ ಮಂತ್ರಿ ಬ್ರಹ್ಮಾನಂದ ರೆಡ್ಡಿಯವರ ಆಸ್ತಿ ತನಿಖೆಗೆ ಆಂಧ್ರ ಯುನಿಕ ಕಾಂಗ್ರೆಸ್ ಕೇಳಿಕೆ ಹಾಕಿ ದೆ-ಅವರು ತಮಗೂ ತಮ್ಮ ಸಂಬಂಧಿ ಗಳಿಗೂ ಭಾರಿ ಮನೆಗಳನ್ನು ಕಟ್ಟಿಕೊಂಡಿ ರುವರೆಂದು ಆಪಾದಿಸಲಾಗಿದೆ.

ಭಾರತವನ್ನು 4 ವಲಯಗಳಾಗಿ ಮಾಡಲು ಒತ್ತಾಯಕ್ಕೆ ಉಪವಾಸ

ಅಮೃತರ— ದೇಶವನ್ನು 4 ವಲಯ ಗಳಾಗಿ ಪುನರ್ವಿಂಗಡಿಸಲು ಒತ್ತಾಯಕ್ಕಾ ಗಿ ಅಖಿಲ ಭಾರತೀಯ ಏಕ್ತೇ ಸಭಾ ಸಂ ಚಾಲಕರಾದ ಶ್ರೀ ರಾಚಪಾಲ್ ಪನೂನ ರವರು ತಾ ॥ 20 ರಿಂದ ಪ್ರಧಾನಿಯವರ ನಿವಾಸದ ಮುಂದೆ ಅನಿರ್ದಿಷ್ಟ ಕಾಲ ಉಪ ವಾಸ ಮಾಡಲು ನಿರ್ಧರಿಸಿರುವರು – ಚಿಕ್ಕ ರಾಜ್ಯಗಳ ಸ್ಥಾಪನೆಯು ಸಂಕುಚಿತ ಮನೋಭಾವ, ಪ್ರಾತೀಯತೆ ಕೋನುವಾರು ಭಾವನೆಗಳಿಗೆ ಪ್ರೋತ್ಸಾಹ ಕೊಡುವವೆಂದು ಸಭೆಯ ಅಭಿಪ್ರಾಯವಾಗಿದೆ.

★

ರೇಷ್ಮೆ ಬೆಲೆ ತಗ್ಗಿಸಲು ಚಳವಳ

ಬೆಂಗಳೂರು— ರಾಜ್ಯದಲ್ಲಿ ಏರುತ್ತಿ ತ್ತಿರುವ ರೇಷ್ಮೆ ಬೆಲೆ ತಗ್ಗಿಸಲು ಚಳವಳ ಹೊಡಲಾಗುವುದೆಂದು ಪೌರ ಸಮಿತಿ ಅಧ್ಯ ಕ್ಷ ಶ್ರೀ ಕೆ ಎಂ ನಾಗಣ್ಣ ಹೇಳಿದರು.

●

ಹೆತೋಟಿ ತೆಗೆಯುವದಿಲ್ಲ

ನವದೆಹಲಿ— ಬಟ್ಟೆ ಮೇಲಿನ ಮತ್ತು ಆದರ ಬೆಲೆಯ ಹತೋಟಿ ತೆಗೆಯಬೇಕೆಂಬ ಶಿಫಾರಸನ್ನು ವಿದೇಶೀ ವಾಪಾರ ಸಚಿವಾಲ ಯವು ತಿರಸ್ಕರಿಸಿದೆ.

○

ಟ್ರಸ್ಟ್ ಬೋರ್ಡಿಗೆ ಎಚ್ಚರಿಕೆ

ಬೆಂಗಳೂರು— ನಗರಕ್ಕೆ ಕಾವೇರಿ ನೀರು ದೊರೆಯುವವರೆಗೆ ಮನೆ ನಿವೇಶನಗಳ ಕ್ರಮಪಡಿಸಕೂಡದೆಂದು ನಗರಾಭಿವೃದ್ಧಿ ಸಮಿತಿಗೆ ಬೆಂಗಳೂರು ನೀರು ಸರಬರಾಜು ಮತ್ತು ಭೂಗರ್ಭ ಜರಂಡಿ ಸಮಿತಿ ಎಚ್ಚರಿಕೆ ನೀಡಿದೆ.

●

ಬಾದಷಾ ಖಾನರಿಗೆ ಕೊಟ್ಟ ಹಣ

ನವದೆಹಲಿ— ಖಾನ್ ಅಬ್ದುಲ್ ಗಫಾರ್ ಖಾನರಿಗೆ ರೂ 32 ಲಕ್ಷ ಕೊಡಲಾಗಿದ್ದು, ಆಷ್ಟು ಹಣಕ್ಕೆ ಭಾರತದ ಚೆಕ್ಕನ್ನು ಅವರು ತೆಗೆದುಕೊಂಡು ಹೋಗುವರು – ಅವರಿಗೆ ರೂ 80 ಲಕ್ಷ ಕೊಡಬೇಕೆಂಬ ಗುರಿ ಇತ್ತೆಂದೂ ಆದರೆ ಆಷ್ಟು ಶೇಖರವಾಗಲಿಲ್ಲ – ಅವರು ಒಟ್ಟು 21ಗ ಸಭೆಗಳಲ್ಲಿ ಭಾಷಣಮಾಡಿದರು.

○

ಲಾಟರಿ ವಿರುದ್ಧ

ಬೆಂಗಳೂರು— ಸರಕಾರವು ಲಾಟರಿ ನಡೆಸುವದನ್ನು ನಿಲ್ಲಿಸದಿದ್ದರೆ, ಶಾಸನಭಂಗ ಕಾರ್ಯಕ್ರಮ ಪಾರಂಭಿಸಲು ಪೌರಸಮಿ ಯೋಚಿಸಿರುವದೆಂದು ಸಮಿತಿ ಅಧ್ಯಕ್ಷ ಶ್ರೀ ಕೆ ಎಂ ನಾಗಣ್ಣ ಹೇಳಿರುವರು.

○

ನಿತ್ಯವೂ ಮರಣಾಜ್ಞೆ ವಿಧಿ

ಗೌಹತಿ— ರಾಜ್ಯಸಭೆಯಲ್ಲಿ ಕಾಂಗ್ರೆಸ್ ವಿರುದ್ಧ ನಾಯಕ ಶ್ರೀ ಎಸ್ ಎಂ ಮಿಶ್ರರು, ತಮ್ಮ ಪಾರ್ಟಿಯು ಪಾರ್ಲಿಮೆಂಟು ಬಡ್ಜೆಟ್ ಅಧಿವೇಶನದಲ್ಲಿ ಪ್ರತಿ ದಿನವೂ ಇಂದಿರಾರವರ ಸರಕಾರದ ಮೇಲೆ ಮರಣಾಜ್ಞೆ ವಿಧಿಯನ್ನು ತರುತ್ತಿರುವದೆಂದು ಹೇಳಿದರು.

★

ಶಿವಮೊಗ್ಗಾದಲ್ಲಿ ಜನಸಂಘದ ಆಶ್ರಯದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸೈಕಲ್ ತೆರಿಗೆ ವಜಾಮಾಡಲು ಸರಕಾರಕ್ಕೆ ಕೇಳಿಕೆ ಹಾಕಲಾಯಿತು.

★

ಮಂಗಳೂರು— ಮೂರು ಮಂದಿಯನ್ನು ದಸ್ತಗಿರಿ ಮಾಡಿ, ರೂ 2225 ಬೆಲೆಯ ಗಂಧದ ಮರವನ್ನು ವಶಪಡಿಸಿಕೊಳ್ಳಲಾಯಿತು.

ಆಪೆರಾ— 6-2-70 ರಿಂದ

.... ಅತ್ಯುತ್ತಮ ಹಿಂದಿ ಚಿತ್ರ ....

ಪಾರ್ ಹಿ ಪಾರ್

ಶಿ ಲ

ದಿನ 3 ಆಟಗಳು

ವುಡ್‌ಲಾಂಡ್ ಅಮೋಘ 6 ನೇ ವಾರ

ಶಿ ಇ ಅಮೋಘ ಪ್ರಾರಂಭ

ಒಬ್ಬ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆ ಪೂಜೆ

ಜ

[ದಿನ 3 ಪ್ರದರ್ಶನಗಳು]

ನಿನಗೆ ಒಳ್ಳೆಯದನ್ನು ಬಯಸುವ ಸ್ತ್ರೀಗಿಂತ, ನಿನಗೆ ಕೆಟ್ಟದನ್ನು ಬಯಸುವ ಪುರುಷನೇ ಉತ್ತಮ
— ಎಕ್ಲೆಸಿಯಾಸ್ಟಸ್

SHAKTI SUDHA

A Superb Tonic

1957. ಅವನಿಗಾಗ ಎಂಟು ವರ್ಷ ಪ್ರಾಯ...

ಅವನತಂದೆ ಮುಂದೆ ಕಾಲೇಜು ಶಿಕ್ಷಣದ ಖರ್ಚನ್ನು ಎದುರಿಸಬೇಕಾಗಿತ್ತು

ಉನ್ನತ ವಿದ್ಯಾಭ್ಯಾಸವನ್ನು ಅವನಿಗೆ ಒದಗಿಸಲು ಸಾಧ್ಯವಾಗುವುದೋ ಇಲ್ಲವೊ ಎಂಬ ಯೋಚನೆ. ತನ್ನ ಮಗನಿಗೆ ಔದ್ಯೋಗಿಕ ಶಿಕ್ಷಣವನ್ನು ಪಡೆಯುವ ಅವಕಾಶವನ್ನು ಕೊಡ ಬೇಕೆಂದು ಅವನ ಇಚ್ಛೆಯಾಗಿತ್ತು. ಆದುದರಿಂದ ಹುಡುಗನು ನಿಶ್ಚಿತವಾಗಿ ಒರ್ವ ಎಂಜಿನೀಯರ್ ಆಗುವಂತೆ ಆತನು ಮುಂಚಿತವಾಗಿ ಹಣವನ್ನು ಉಳಿಸುತ್ತಾ ಬಂದನು. ತಾನಿಲ್ಲದಿದ್ದರೂ ತನ್ನ ಮಗನಿಗೆ ಹಣವನ್ನು ಒದಗಿಸುವ ಭರವಸೆಯನ್ನು ಕೊಡುವ ಒಂದು ಎಶ್ಯುಕೇಶನಲ್ ಎನ್ಯುಟಿ ಪಾಲಿಸಿಯಲ್ಲಿ ಅವನು ಉಳಿತಾಯವನ್ನು ಮಾಡಿದನು. ಈ ಅದ್ವಿತೀಯ ಭದ್ರತೆಯನ್ನು ಕೊಡಲು ಜೀವ ವಿಮೆಗೆ ಮಾತ್ರ ಸಾಧ್ಯ. ಆ ಸಮಯದಲ್ಲಿ ಕೇವಲ 30 ವರ್ಷ ಪ್ರಾಯದವನಾಗಿದ್ದ ಆತನು ಪ್ರತಿ ತಿಂಗಳು ರೂ. 25-13 ಪ್ರೀಮಿಯಮನ್ನು 15 ವರ್ಷಗಳವರೆಗೆ ಕೊಟ್ಟನು. ಈಗ ಅವನ ಮಗನಿಗೆ ಕಾಲೇಜು ವಿದ್ಯಾಭ್ಯಾಸದ ಖರ್ಚಿಗಾಗಿ ಪ್ರತಿ ಆರು ತಿಂಗಳಿಗೊಮ್ಮೆ ರೂ. 400 ರಂತೆ 5 ವರ್ಷಗಳಿಗೆ ದೊರೆಯುವುದು. ಈ ಪೇಲಾಟದ ಜಗತ್ತಿನಲ್ಲಿ ನಿಮ್ಮ ಮಗನನ್ನು ಸರಿಯಾಗಿ ಸಿದ್ಧಪಡಿಸಿದೆ ಜಗತ್ತನ್ನೆದುರಿಸಲು ಏಕೆ ಬಿಡುವಿರಿ? ನೀವು ಮಾಡಬೇಕಾದುದು ಸ್ವಲ್ಪ ಸ್ಪೆರ್ವಾಜೋಜನೆ. ಇಂದೇ ಒರ್ವ ಎಲ್. ಐ. ಸಿ. ಏಜಂಟನನ್ನು ಕಾಣಿರಿ. ನಿಮ್ಮ ಮಗನಿಗೆ ಕಾಲೇಜಿಗೆ ಹೋಗಲು ಅವಕಾಶವನ್ನು ಕೊಡುವಂತಹ ಪಾಲಿಸಿಯನ್ನು ಅರಿಸಲು ಆತನು ಸಹಕರಿಸುವನು.



ಜೀವ ವಿಮೆಗಿಂತ ಕ್ಷೇಮ ಉಳಿತಾಯ ಮತ್ತೊಂದಿಲ್ಲ

EP.LIC SZ. 82

Edited, Printed & Published by Dharmaprachara Nirata [illegible] rishna Rao (Proprietor) at the Satyavadi Press Chamarajpet, Mysore

ದೇಶಕ್ಕೆ ಬೇಕಾಗಿರುವದು
ಆ ಹಾ ರ
ಜಿ.ಇ.ಎಫ್. ಪಂಪು ಸೆಟ್ಟುಗಳು
ಅ ದ ರ ಪ ರಿ ಹಾ ರ
ಅತ್ಯಂತ ಆಧುನಿಕ ಶಾಸ್ತ್ರೀಯ ರೀತಿಯಿಂದ
ತ ಯಾ ರಿ ಸ ಲ್ಪ ಟ್ಟ
ಜಿ. ಇ. ಎಫ್.
ಪಂಪು ಸೆಟ್ಟುಗಳನ್ನು
ಉಪಯೋಗಿಸಿ ಹೆಚ್ಚು ಬೆಳೆಯಿರಿ.
ದೇಶದ ಸಂಪತ್ತನ್ನು ಹೆಚ್ಚಿಸಲು
ಹೆಚ್ಚು ಆಹಾರ ಬೆಳೆಯಲು
ಜಿ.ಇ.ಎಫ್. ಪಂಪುಸೆಟ್ಟುಗಳನ್ನೇ
ಉ ಪ ಯೋ ಗಿ ಸಿ ರಿ.
: ತ ಯಾ ರ ಕ ರು :
ಗೌರ್ನಮೆಂಟ್ ಎಲೆಕ್ಟ್ರಿಕ್
ಫ್ಯಾಕ್ಟರಿ, ಬೆಂಗಳೂರು.
ಬೇಡಿಕೆಗಾಗಿ :-
ಮೆ|| ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್,
ನಂ. 36 'ಹರಿನಿವಾಸ್'
ಕನಿಂಗ್ ಹ್ಯಾಮ್ ರೋಡ್,
ಬೆಂಗಳೂರು-1
ಅವರೊಂದಿಗೆ ವ್ಯವಹರಿಸಿ.

ಗೊಮ್ಮಟ ಪುನರ್ನಿರ್ಮಾಣಕ್ಕೆ

ಬೊಂಬಾಯಿ— ಮೈಸೂರು ರಾಜ್ಯದ ಶಿವಮೊಗ್ಗ ಜಿಲ್ಲೆಯ ಹೊದಿಗೆರೆಯಲ್ಲಿ 1664 ರಲ್ಲಿ ನಿಧನರಾದ ಮರಾಠಿ ಅರಸು ಶಿವಾಜೀ ಮಹಾರಾಜರ ಗೋರಿಯನ್ನು ಪುನರ್ನಿರ್ಮಾಣ ಮಾಡಲು 'ಮರಾಠ ಮಂಡಿ" ಸಾಂಸ್ಕೃತಿಕ ಸಂಸ್ಥೆಯು 50000 ರೂಗಳನ್ನು ಕೇಳಿಕರಿಸಲು ಯೋಜಿಸಿದೆ

ಹೆಂಗಸಿನ ವಿಷಯದಲ್ಲಿ

ಒಬ್ಬ ಹೆಂಗಸಿನ ಕೆಟ್ಟತನಕ್ಕಿಂತ ಬಾಕಿ ಎಲ್ಲ ಕೆಟ್ಟತನವೂ ಅತಿ ಕಡಮೆ
— ನ್ಯೂ ಟೆಸ್ಟ್‌ಮೆಂಟ್